# ಮೈಕೊಡವಿ ನಿಲ್ಲುವುದೇ ಚಂದನವನ?



**ಚಿತ್ರಮಂದಿರ ಪೂರ್ತಿ ತೆರೆದುಕೊಳ್ಳುತ್ತಿರುವ ಹಾಗೆಯೇ ಸ್ಟಾರ್ ನಟರ ಚಿತ್ರಗಳು ಒಂದರ ಬೆನ್ನಿಗೆ ಒಂದು ಬಿಡುಗಡೆಗೊಳ್ಳುತ್ತಿವೆ. ಈ ಚಿತ್ರಗಳಿಗೆ ಜನರ ಸ್ಪಂದನ ಹೇಗಿರುತ್ತದೆ ಎನ್ನುವುದು ಒಟ್ಟಾರೆ ಚಿತ್ರಮಂದಿರ ಸಂಸ್ಕೃತಿಯ ಭವಿಷ್ಯವನ್ನೂ ನಿರ್ಧರಿಸಬಹುದು.**

■ ಪದ್ಮನಾಭ ಭಟ್



ಗಾಂಧಿನಗರ ಮೈ ಕೊಡವಿ ಎದ್ದು ನಿಲ್ಲಲು ಸಜ್ಜಾಗಿದೆ!

ಕಳೆದ ಐದು ತಿಂಗಳಿಂದ ಬಳಲಿ ಬೆಂಡಾಗಿದ್ದ ಚಿತ್ರಮಂದಿರಗಳು ಕೆಲವು ದಿನಗಳಿಂದ ‘ಸೀಮಿತ ಪ್ರೇಕ್ಷಕ’ ಆಕ್ಸಿಜನ್ ಉಸಿರಾಡಿಕೊಂಡು ಬದುಕಿದ್ದವು. ಆದರೆ ಸರ್ಕಾರದಿಂದ ಯಾವಾಗ ನೂರಕ್ಕೆ ನೂರರಷ್ಟು ಪ್ರೇಕ್ಷಕರನ್ನು ಚಿತ್ರಮಂದಿರದೊಳಗೆ ಬಿಟ್ಟುಕೊಳ್ಳಬಹುದು ಎಂಬ ಅನುಮತಿ ಸಿಕ್ಕಿತೋ ಆಕ್ಷಣದಿಂದಲೇ ಗಾಂಧಿನಗರದಲ್ಲಿ ಮಿಂಚಿನ ಸಂಚಾರ ಆರಂಭವಾಗಿದೆ. ಈ ವರ್ಷಾರಂಭದಲ್ಲಿ ಹಾಕಿದ್ದ ಹೂವುಗಳು, ನಿಲ್ಲಿಸಿದ್ದ ಕಟೌಟ್‌ಗಳನ್ನು ಕೆಳಗಿಳಿಸಿ, ಹೊಸ ಉತ್ಸಾಹದಲ್ಲಿ ಸಿನಿಮಾಗಳನ್ನೂ, ಪ್ರೇಕ್ಷಕರನ್ನೂ ಬರಮಾಡಿಕೊಳ್ಳಲು ಚಿತ್ರರಂದಿರಗಳು ಸಜ್ಜಾಗಿವೆ.

ಈ ಉತ್ಸಾಹಕ್ಕೆ ಪೂರಕವಾಗಿ ಕಳೆದ ವರ್ಷದಿಂದ ಕಾದಿದ್ದ ಹಲವು ಸ್ಟಾರ್ ಸಿನಿಮಾಗಳು ಈಗ ಮರೆಯಿಂದ ಹೊರಬಂದು, ತಮ್ಮ ಅಭಿಮಾನಿಗಳನ್ನು ಜಾಗೃತಗೊಳಿಸುವ ಹಾಗೆ ಗುರುಗುಟ್ಟುತ್ತಿವೆ. ‘ಸಲಗ’ ಸೊಂಡಿಲೆತ್ತಿ ಘೀಳಿಟ್ಟರೆ, ಭಜರಂಗಿ ಭುಜ ಕೊಡವಿಕೊಂಡು ಎದ್ದುನಿಂತಿದ್ದಾನೆ. ಇತ್ತ ‘ಕೋಟಿಗೊಬ್ಬ’ನ ಮತ್ತೊಂದು ಅವತಾರ ಸಿಗಾರು ಹೊಗೆಯಲ್ಲಿಯೇ ಹಗೆಗಳನ್ನು ತೂರಿಬಿಡುತ್ತ ಮಜಾ ಕೊಡಲು ನಾನ್ ರೆಡಿ ಎನ್ನುತ್ತಿದ್ದಾನೆ.

ಇವಲ್ಲದೆ, ‘ನಿನ್ನ ಸನಿಹಕೆ’ ಪ್ರೇಕ್ಷಕನ ಸನಿಹದ ಮೆಚ್ಚುಗೆಗೆ ಹಾತೊರೆಯುತ್ತಿದ್ದರೆ, **shrikrishna@gmail.com** ಸಹೃದಯನ ಎದೆಗೆ ನೇರವಾಗಿ ಮೇಲ್ ಮಾಡುವ ಉಮೇದಿನಲ್ಲಿದ್ದಾನೆ.

ಮೇಲು ನೋಟಕ್ಕೆ ದೊಡ್ಡ ಸಂಭ್ರಮವೊಂದಕ್ಕೆ ಗಾಂಧಿನಗರ ಅಣಿಯಾಗುತ್ತಿರುವಂತೆ ಕಾಣುತ್ತಿದ್ದರೂ, ಎಲ್ಲರಿಗೂ ಒಳಗೊಳಗೇ ಸಣ್ಣ ನಡುಕ ಇರುವುದೂ ಸುಳ್ಳಲ್ಲ. ಯಾಕೆಂದರೆ ಸರ್ಕಾರವೇನೋ ಚಿತ್ರಮಂದಿರದಲ್ಲಿ ನೂರಕ್ಕೆ ನೂರರಷ್ಟು ಪ್ರೇಕ್ಷಕರು ಹೊಕ್ಕಲು ಅನುಮತಿ ಕೊಟ್ಟಿದೆ; ಆದರೆ ಪ್ರೇಕ್ಷಕನಿಗೆ ನೂರಕ್ಕೆ ನೂರರಷ್ಟು ಧೈರ್ಯ ಬೇಕಲ್ಲ! ಎಲ್ಲ ಸರಿಯಿರುವಾಗಲೇ ‘ಚಿತ್ರಮಂದಿರ ತುಂಬಿದೆ’ ಎಂಬ ಬೋರ್ಡು ಮಾಸಲುಗೊಂಡಿತ್ತು. ಈಗ ಕೊರೊನಾ ಹಾವಳಿ ಕೊಂಚ ತಗ್ಗಿದ್ದರೂ ಜನರು ಅದರ ‘ಅಡ್ಡ ಪರಿಣಾಮ’ವಾದ ಆರ್ಥಿಕ ಸಂಕಷ್ಟದ ಸುಂಟರಗಾಳಿಯಲ್ಲಿ ಸಿಲುಕಿಕೊಂಡು ಒದ್ದಾಡುತ್ತಿದ್ದಾರೆ. ಅವನ ಮನಸಲ್ಲಿ ವಿಶ್ವಾಸ ತುಂಬಿ ಚಿತ್ರಮಂದಿರಕ್ಕೆ ಕರೆತರುವುದು ಸುಲಭವೇನೂ ಅಲ್ಲ.

ಇದು ಒಂದೆಡೆಯಾದರೆ, ಇಂಥ ಸಂಕಷ್ಟದ ಸಂದರ್ಭದಲ್ಲಿ ಚಿತ್ರರಂಗ ಸಂಘಟಿತವಾಗಿ ಕೆಲಸ ಮಾಡಬೇಕಿತ್ತು. ಆ ಯಾವ ಲಕ್ಷಣಗಳೂ ಗಾಂಧಿನಗರದಲ್ಲಿ ಕಾಣಿಸುತ್ತಿಲ್ಲ. ‘ತಾನೊಂದು ಬದುಕಿಕೊಂಡರೆ ಸಾಕು’ ಎಂಬ

